ದಿನಾಂಕ ಃ 23.09.2024
ಅಸಲು ದಾವೆ: 101/2021
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಃ 4 ರಿಂದ ದ 6 ನೇ ಪ್ರತಿವಾದಿಗ ಪರ ವಕೀಲರಾದ ಶ್ರೀ ಡಿ.ಎಂ.ಎಂ. ರವರಿಂದ ಃ</u>**

ನಾನು ಬಿ.ಇ. ಇಂಜಿನಿಯರಿಂಗ್ ಮಾಡಿರುತ್ತೇನೆ. ನನ್ನ ತಾತ ಸಿದ್ದೇಗೌಡ ಬಿನ್ ಚನ್ನೇಗೌಡರವರ ಜೊತೆ ಹುಟ್ಟಿದವರು ಎಷ್ಟುಜನ ಎಂಬುದು ನನಗೆ ಗೊತ್ತಿಲ್ಲ. ನಿಮ್ಮ ತಾತ ಅವರ ಸಹೋದರರ ನಡುವೆ ಯಾವಾಗ ವಿಭಾಗ ಮಾಡಿಕೊಂಡರು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ನಿಮ್ಮ ತಾತರವರಿಗೆ ಬಂದಿರುತ್ತವೆ ಎಂಬುದನ್ನು ತೋರಿಸಲು ಯಾವ ದಾಖಲಾತಿಗಳನ್ನು ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಾತ 2016 ರಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳನ್ನು 3 ನೇ ಪ್ರತಿವಾದಿ, ಪ್ರತಿವಾದಿ 4, 5 ಮತ್ತು 6 ರವರ ಜೊತೆ ಸೇರಿಕೊಂಡು ದಾವಾ ಐಟಂ ನಂ.3, 7, 8 ಸ್ವತ್ತುಗಳನ್ನು 1 ಮತ್ತು 4 ನೇ ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ, ಐಟಂ ನಂ.4 ನೇ ಸ್ವತ್ತನ್ನು 1 ನೇ ಪ್ರತಿವಾದಿಯ ಹೆಸರಿಗೆ ಅದೇ ರೀತಿ ದಾವಾ ಐಟಂ ನಂ.9 , 10, 11, 12, 14 ಸ್ವತ್ತುಗಳನ್ನು ನಮ್ಮ ತಂದೆಯಾದ 2 ನೇ ಪ್ರತಿವಾದಿಯು ಹೆಸರಿಗೆ, ಅದೇ ರೀತಿ ಐಟಂ ನಂ.13, 15, 16,17 ಮತ್ತು 18 ಅನ್ನು 3 ನೇ ಪ್ರತಿವಾದಿಯ ಹೆಸರಿಗೆ , ಹಾಗೆಯೇ ದಾವಾ ಐಟಂ ನಂ.23 ನೇ ಸ್ವತ್ತನ್ನು 6 ನೇ ಪ್ರತಿವಾದಿಗೆ ಅಕ್ರಮವಾಗಿ ಖಾತೆ ವರ್ಗಾವಣೆ ಮಾಡಿರುತ್ತಾರೆ ಎಂದು ಹೇಳಿದ್ದೀರಿ, ಆ ರೀತಿ ಮಾಡಿದ್ದಾರೆ ಎಂದು ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಯಾವ ಆಧಾರದ ಮೇಲೆ ಆ ರೀತಿ ಖಾತೆ ವರ್ಗಾವಣೆ ಮಾಡಿದ್ದಾರೆ ಎಂದು ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿ ಯಾವ ಆಧಾರದ ಮೇಲೆ ಎಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಅಕ್ರಮವಾಗಿ ಖಾತಾ ಆಗಿದೆ ಎಂದು ಹೇಳಿದ್ದೀರಾ, ಈ ವಿಷಯವನ್ನು ನಿಮಗೆ ತಿಳಿಸಿದವರು ಯಾರು ಎಂದರೆ ಸಾಕ್ಷಿ ನನ್ನ ತಾಯಿ ಎಂದು ಉತ್ತರಿಸುತ್ತಾರೆ. 2021 ರಲ್ಲಿ ನನ್ನ ತಾಯಿ ನನಗೆ ತಿಳಿಸಿರುತ್ತಾರೆ.

ಅದೇ ರೀತಿ ದಾವಾ ಐಟಂ 24, 26, 28 ಅನ್ನು ನಿಮ್ಮ ತಂದೆಯ ಹೆಸರಿಗೆ , ದಾವಾ ಐಟಂ ನಂ.25, 27 ಅನ್ನು 3 ನೇ ಪ್ರತಿವಾದಿಯ ಹೆಸರಿಗೆ, ದಾವಾ ಐಟಂ ನಂ.29, 32 ಅನ್ನು 5 ನೇ ಪ್ರತಿವಾದಿಯ ಹೆಸರಿಗೆ, ದಾವಾ ಐಟಂ ನಂ.30, 31 ಅನ್ನು ನಿಮ್ಮ ತಾತ ಸಿದ್ದೇಗೌಡರ ಹೆಸರಿಗೆ ಕಂದಾಯ ಅಧಿಕಾರಿಗಳ ಜೊತೆ ಶರೀಕಾಗಿ ಖಾತಾ ವರ್ಗಾವಣೆ ಮಾಡಿರುತ್ತಾರೆ ಎಂದು

ಹೇಳಿದ್ದೀರಿ, ನಿಮಗೆ ದಿನಾಂಕ ಗೊತ್ತಿಲ್ಲ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಯಾವ ಆಧಾರದ ಮೇಲೆ ಈ ಮೇಲೆ ಹೇಳಿದ ರೀತಿ ಖಾತೆ ವರ್ಗಾವಣೆ ಅಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.33 ನೇ ಸ್ವತ್ತನ್ನು ನಿಮ್ಮ ತಾತ ಪ್ರತಿವಾದಿ 7 ರವರ ಹೆಸರಿಗೆ ಅಕ್ರಮವಾಗಿ ಮಾರಾಟ ಮಾಡಿರುತ್ತಾರೆ ಎಂದು ಹೇಳಿದ್ದೀರಿ, ಯಾವ ರೀತಿ ಅಕ್ರಮ ಎಂದರೆ ಸಾಕ್ಷಿ ಮಾರಾಟ ಮಾಡಿರುವ ವಿಚಾರ ನಮ್ಮ ಅಜ್ಜಿ, ನಮ್ಮ ತಾಯಿ ಯಾರಿಗೂ ಗೊತ್ತಿಲ್ಲದಂತೆ ಮಾಡಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ಬರೆದುಕೊಟ್ಟಿರುವ ದಿನಾಂಕ 04.02.2016 ರ ಕ್ರಯ ಪತ್ರವನ್ನು ನಿಮ್ಮ ತಂದೆಯಾಗಲಿ, ಅವರ ಸಹೋದರರಾಗಲಿ , ಅಜ್ಜಿಯಾಗಲಿ ಯಾರು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಕ್ರಯಪತ್ರದ ಪ್ರಕಾರ 8 ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದು ಹೇಳಿದ್ದೀರಿ, ಸದರಿ ಖಾತೆಯನ್ನು ರೆವಿನ್ಯೂ ನ್ಯಾಯಾಲಯದಲ್ಲಿ ನೀವಾಗಲಿ, ನಿಮ್ಮ ತಂದೆಯಾಗಲಿ, ಅವರ ಸಹೋದರರಾಗಲಿ, ಅಜ್ಜಿಯಾಗಲಿ ಯಾರು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ದಾವಾ ಐಟಂ ನಂ.20 ಮತ್ತು 32 ಅನ್ನು 5 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಹಣದ ಅವಶ್ಯಕತೆಗಾಗಿ ಮಾರಾಟ ಮಾಡಿರಬಹುದು ಎಂದು ಉತ್ತರಿಸುತ್ತಾರೆ. 8 ನೇ ಪ್ರತಿವಾದಿಗೆ ಮಾಡಿಕೊಟ್ಟಿರುವ ಕ್ರಯ ಪತ್ರವನ್ನು ನಿಮ್ಮ ತಂದೆಯಾಗಲಿ, ಅವರ ಸಹೋದರರಾಗಲಿ, ಅಜ್ಜಿಯಾಗಲಿ ಯಾರು ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಈಗ ಗೊತ್ತಾಗಿದ್ದು ಬೇರೆ ಯಾರು ಪ್ರಶ್ನೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಾನು ಬೆಂಗಳೂರಿನಲ್ಲಿ ಐ.ಟಿ.ಸಿ. ಇನ್ ಫೋಟೆಕ್ ನಲ್ಲಿ ಇಂಜಿನಿಯರಿಂಗ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಈ ಮೇಲೆ ಹೇಳಿದ ಕಂಪನಿಯಲ್ಲಿ 2021 ರಿಂದ ಮಾಡುತ್ತಿದ್ದೇನೆ, ಆದರೆ 2018 ರಿಂದ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. 2018 ರಲ್ಲಿ ನನ್ನ ವಿದ್ಯಾಭ್ಯಾಸ ಮುಗಿದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ, ಆದರೆ ಹಾಜರು ಪಡಿಸುತ್ತೇನೆ. 2016 ನೇ ಇಸವಿಯಲ್ಲಿ ಬೆಂಗಳೂರಿನ ಪಿಳ್ಳಪ್ಪ ಕಾಲೇಜಿನಲ್ಲಿ ಇಂಜಿನಿಯುರಿಂಗ್ ವಿದ್ಯಾಭ್ಯಾಸ ಮಾಡುತ್ತಿದ್ದೆನು. ನಿಮ್ಮ ತಂದೆಯವರಿಗೆ ಏನು ದುಶ್ಚಟಗಳು ಇವೆ ಎಂದರೆ ಸಾಕ್ಷಿ ಕುಡಿಯುತ್ತಾರೆ ಎಂದು ಉತ್ತರಿಸುತ್ತಾರೆ. ನಾನು 5 ನೇ ತರಗತಿ ಬಂದಾಗಿನಿಂದಲೂ ಅವರು ಕುಡಿಯುವುದನ್ನು ನೋಡಿದ್ದೇನೆ. ಕುಡಿತದ ಉದ್ದೇಶಕ್ಕಾಗಿ ನಿಮ್ಮ ತಂದೆ ಯಾರು ಯಾರಿಗೆ ಯಾವ ಯಾವ ಆಸ್ತಿ ಮಾರಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಈಗ ಗೊತ್ತಾಗಿದೆ ಎಂದು ಉತ್ತರಿಸುತ್ತಾರೆ. ಲಕ್ಷ್ಮಮ್ಮ ಎನ್ನುವವರಿಗೆ ಮಾರಿದ್ದಾರೆ, ಐಟಂ ನಂಬರ್ ಗೊತ್ತಿಲ್ಲ. ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಯಾವ ವರ್ಷ ಮಾರಿದ್ದಾರೆ ಎಂದರೆ ಸಾಕ್ಷಿ ವರ್ಷ ಗೊತ್ತಿಲ್ಲ, ನಾನು ಇಂಜಿನಿಯರಿಂಗ್ ಓದುವಾಗ ಮಾರಿದ್ದಾರೆ. ನಿಮ್ಮ ತಂದೆ ಒಬ್ಬರೆ ಮಾರಾಟ ಮಾಡಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಪತ್ರಕ್ಕೆ ನಿಮ್ಮ ತಂದೆ ನೀವು ಮತ್ತು ಸಹೋದರ ಮತ್ತು ತಾಯಿ ಸಹಾ ಸಹಿ ಹಾಕಿದ್ದಾರೆ ಎಂದರೆ ಸಾಕ್ಷಿ ಯಾವುದೋ ಸಾಲ ತೆಗೆದುಕೊಳ್ಳಲು ಅರ್ಜೆಂಟ್ ಇದೆ ಎಂದು

ಗಲಾಟೆ ಮಾಡುತ್ತಿದ್ದರು, ಆಗ ನಾನು internals ಗೆ ಹೋಗಲು ಅರ್ಜೆಂಟ್ ನಲ್ಲಿ ಇದ್ದೆ, ಹಾಗಾಗಿ ಸಹಿ ಹಾಕಿ ಹೋಗಿರುತ್ತೇನೆ, ಆ ಪತ್ರ ಏನು ಎಂದು ಇತ್ತೀಚೆಗೆ ತೆಗೆಸಿ ನೋಡಿದಾಗಲೇ ನನಗೆ ಮಾರಿರುವುದು ಗೊತ್ತಾಗಿದ್ದು ಎಂದು ಉತ್ತರಿಸುತ್ತಾರೆ. ಸಾಕ್ಷಿ ನಿಪಿ.53 ಅನ್ನು ತೋರಿಸಿ ಅದರಲ್ಲಿ ಕಾಣುವ ಫೋಟೋದಲ್ಲಿ ಇರುವವರು ನೀವೇ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಆ ಫೋಟೋವನ್ನು ನೋಡಿ ಹೌದು ಎಂದು ಉತ್ತರಿಸುತ್ತಾರೆ.

ಲಕ್ಷ್ಮಮ್ಮನವರಿಗೆ ಸದರಿ ಸ್ವತ್ತನ್ನು ರೂ.1,32,000/- ಗಳಿಗೆ ಮಾರಾಟ ಮಾಡಿದ್ದು ನಿಮ್ಮ ವಿದ್ಯಾಭ್ಯಾಸದ ಖರ್ಚು ಹಾಗೂ ಕುಟುಂಬದ ಇತರೆ ಖರ್ಚುಗಳಿಗೋಸ್ಕರವಾಗಿ ಮಾರಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಆ ಪತ್ರದಲ್ಲಿ ಸದರಿ ಸ್ವತ್ತು ನಮ್ಮ ತಂದೆ ವಿಭಾಗದಲ್ಲಿ ಬಂದ ಪಿತ್ರಾರ್ಜಿತವಾದ ಸ್ವತ್ತಾಗಿದ್ದು ತಮ್ಮ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದು ಬರೆಸಿ ಸಹಿ ಹಾಕಿದ್ದೀರಿ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಓದಿರುವುದಿಲ್, ಸಹಿ ಮಾತ್ರ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಪತ್ರ ನೋಂದಣಿಯಾದಾಗ ಮದ್ಯಾಹ್ನವಾಗಿತ್ತು ಸಮಯ ಗೊತ್ತಿಲ್ಲ. ಅಂದಾಜು ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ 12.00 ರಿಂದ 12.30 ಇರಬೇಕು ಎಂದು ಉತ್ತರಿಸುತ್ತಾರೆ. ಪತ್ರವನ್ನು ನಿಮಗೆ ಯಾವ ಕಾರಣಕ್ಕೆ ಓದಲು ಆಗಲಿಲ್ಲ ಎಂದರೆ ಸಾಕ್ಷಿ ಕಾಲೇಜಿನಲ್ಲಿ ಇಂಟರ್ ನಲ್ಸ್ ಇತ್ತು ಲೇಟ್ ಆಗುತ್ತದೆ ಎಂಬ ಕಾರಣಕ್ಕೆ ಓದಲಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಕ್ರಯ ಪತ್ರ ಸುಳ್ಳು ಎಂಬುದು ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ 2021 ರಲ್ಲಿ ಎಲ್ಲಾ ಮಾರಿದ್ದಾರೆ ಎಂದು ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ನಿಮಗೆ ವಿಷಯ ಗೊತ್ತಾದ ನಂತರ ನಿಮ್ಮ ವಕೀಲರಿಗೆ ತಿಳಿಸಿ ವಾದ ಪತ್ರ ತಿದ್ದುಪಡಿ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ನಿಮ್ಮ ತಂದೆ ಮೋಸ ಮಾಡಿದ್ದಾರೆ ಎಂದು ಗೊತ್ತಾದ ನಂತರ ನೀವೇನಾದರೂ ನಿಮ್ಮ ತಂದೆಯ ವಿರುದ್ದ ಪೊಲೀಸ್ ಕಂಪ್ಲೇಂಟ್ ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ರೀತಿ ದೂರು ದಾಖಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಏನು ಇರಲಿಲ್ಲ ಎಂದು ಉತ್ತರಿಸುತ್ತಾರೆ.

ನಿಮ್ಮ ಊರಿನ ಬಸವೇಗೌಡರವರು ನಿಮ್ಮ ತಂದೆಯವಿರುದ್ದ ಅಸಲು ದಾವಾ 150/2018 ನ್ನು ದಾವಾ ಐಟಂ ನಂ.28 ಕ್ಕೆ ಸಂಬಂಧಪಟ್ಟಂತೆ ಇದೆ ನ್ಯಾಯಾಲಯದಲ್ಲಿ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ನಿಮ್ಮ ತಂದೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಸದರಿ ಸ್ವತ್ತು ತನಗೆ ಮತ್ತು ತನ್ನ ಸಹೋದರರಿಗೆ ಆದ ವಿಭಾಗದಲ್ಲಿ ತನ್ನ ಭಾಗಕ್ಕೆ ಬಂದ ಪಿತ್ರಾರ್ಜಿತವಾದ ಸ್ವತ್ತು ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ಉತ್ತರಿಸುತ್ತಾರೆ. 17.07.2013 ರ ವಿಭಾಗದಲ್ಲಿ ನಿಮ್ಮ ಅಜ್ಜಿಯವರಿಗೆ ದಾವಾ ಐಟಂ ನಂ.4 ನೇ ಸ್ವತ್ತು ಅವರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಭಾಗವೇ ಆಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಗೆ ಐಟಂ ನಂ.3, 7, 9, 10, 11 ರಿಂದ 13, 18, 24 ಮತ್ತು 28 ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿ ಭಾಗ ಆಗಿಲ್ಲ ಎಂದು ಉತ್ತರಿಸುತ್ತಾರೆ.

ಅದೇ ರೀತಿ 3 ನೇ ಪ್ರತಿವಾದಿಯ ಭಾಗಕ್ಕೆ ಐಟಂ ನಂ.8, 14, 15, 16, 17, 25, 27, 30 ಮತ್ತು 31 ಬಂದಿರುತ್ತವೆ ಎಂದರೆ ಸಾಕ್ಷಿ ಭಾಗ ಆಗಿಲ್ಲ ಎಂದು ಉತ್ತರಿಸುತ್ತಾರೆ. ಗೌರಮ್ಮನವರಿಗೆ ಐಟಂ ನಂ.5 ಮತ್ತು 6 ನೇ ಸ್ವತ್ತುಗಳು ಭಾಗಕ್ಕೆ ಹೋಗಿವೆ ಎಂದರೆ ಸಾಕ್ಷಿ ಗೌರಮ್ಮನವರು ಯಾರೆಂಬುದೇ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹಾಗೇ ಚಂದ್ರಕುಮಾರ್ ರವರಿಗೆ ಐಟಂ ನಂ.1, 2, 19, 20, 21, 22, 29, 32 ಮತ್ತು 33 ನೇ ಸ್ವತ್ತುಗಳು ಭಾಗಕ್ಕೆ ಬಂದಿರುತ್ತವೆ ಎಂದರೆ ಸಾಕ್ಷಿ ಭಾಗ ಆಗಿಲ್ಲ ಎಂದು ಉತ್ತರಿಸುತ್ತಾರೆ. ನಂದಿನಿಯವರಿಗೆ ಐಟಂ ನಂ.6 ಭಾಗಕ್ಕೆ ಬಂದಿರುತ್ತದೆ ಎದರೆ ಸಾಕ್ಷಿ ಭಾಗ ಆಗಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಭಾಗದ ಪ್ರಕಾರ ಅವರವರ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿ ವಿಭಾಗವೇ ಆಗಿಲ್ಲ, ಸುಮ್ಮನೇ ಅವರೆ ಮಾಡಿಸಿಕೊಂಡಿದ್ದಾರೆ ಅಷ್ಟೇ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ವೈಯಕ್ತಿಕವಾಗಿ ಗೌರಮ್ಮ, ಚಂದ್ರಕುಮಾರ್, ನಂದಿನಿ ಇವರ ವಿರುದ್ಧ ವೈಯಕ್ತಿಕವಾಗಿ ಯಾವುದೇ ಕೇಸ್ ಹಾಕಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ನಿಮ್ಮ ತಾತ ಇರುವಾಗಲೇ ಚಂದ್ರಕುಮಾರ್, ಗೌರಮ್ಮ ಮತ್ತು ನಂದಿನಿಯವರಿಗೆ ವಿಭಾಗದ ಮೂಲಕ ಕೊಟ್ಟಿರುವ ಸ್ವತ್ತುಗಳನ್ನು ಹೇಗಾದರೂ ಮಾಡಿ ಕಬಳಿಸಬೇಕು ಎಂಬ ದುರುದ್ದೇಶದಿಂದ ನಿಮ್ಮ ತಂದೆ ನಿಮ್ಮನ್ನು ಎತ್ತಿಕಟ್ಟಿ ಈದಾವೆ ಹಾಕಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಹಾಗೂ ಬಸವರಾಜು ಒಂದೇ ತಾಯಿಯ ಮಕ್ಕಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಗೌರಮ್ಮನವರು ನಿಮ್ಮ ತಾತನ 2 ನೇ ಹೆಂಡತಿ ಎಂದು ಗೊತ್ತಿದ್ದರೂ ಸಹಾ ಅವರಿಗೆ ಕೊಟ್ಟಿರುವ ಆಸ್ತಿಯನ್ನು ಕಬಳಿಸಲು ನಿಮ್ಮ ತಾತ ಅವರನ್ನು ಇರಿಸಿಕೊಂಡಿದ್ದರು ಎಂದು ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 17.07.2013 ರಿಂದ ಈಚೆಗೆ ನಿಮ್ಮ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಒಟ್ಟುಕುಟುಂಬ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸಾಕ್ಷಿ ನಾನು ಮತ್ತು ಚಿಕ್ಕಪ್ಪ ಈಗಲೂ ಒಟ್ಟಿಗೆ ಇದ್ದೇವೆ ಎಂದು ಉತ್ತರಿಸುತ್ತಾರೆ. ಯಾವ ಆಸ್ತಿಗಳೂ ಜಂಟಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.